# ‘ವಿವೇಕ ಸ್ಮಾರಕ’ : ಒಂದು ಮುನ್ನೋಟ

ಸ್ವಾಮಿ ಮುಕ್ತಿದಾನಂದ



## ಹಿನ್ನೆಲೆ

ಭಾರತದ ಪುನರುತ್ಥಾನ ಕಾರ್ಯದಲ್ಲಿ ಸ್ವಾಮಿ ವಿವೇಕಾನಂದರನ್ನು ಒಂದು ಉಜ್ಜ್ವಲ ತಾರೆಯಾಗಿ ಪರಿಗಣಿಸಲಾಗುತ್ತಿದೆ. ಭಾರತದ ಪುನರ್ನಿರ್ಮಾಣದಲ್ಲಿ ಅವರ ಕೊಡುಗೆ ಅನುಪಮವಾದುದು. ೨೦೧೦ರಲ್ಲಿ ಭಾರತ ಸರ್ಕಾರವು ಅವರ ೧೫೦ ನೇ ಜನ್ಮ ಶತಮಾನೋತ್ಸವವನ್ನು ಸಮರ್ಪಕವಾದ ರೀತಿಯಲ್ಲಿ ನಡೆಸಲು ತೀರ್ಮಾನಿಸಿತು. ಇದಕ್ಕಾಗಿ ಸರ್ಕಾರವು ‘‘ರಾಷ್ಟ್ರೀಯ ಕಾರ್ಯ ಸಮಿತಿ’’ (National Implementation Committee - NIC) ಯೊಂದನ್ನು ರಚಿಸಿತು. ಆಗಿನ ಪ್ರಧಾನ ಮಂತ್ರಿಗಳಾಗಿದ್ದ ಡಾ. ಮನಮೋಹನ ಸಿಂಗ್ ಅದರ ಅಧ್ಯಕ್ಷರಾಗಿದ್ದರು; ಅವರೊಂದಿಗೆ ಶ್ರೀ ನರೇಂದ್ರ ಮೋದಿ, ಶ್ರೀ ಎಸ್.ಎಂ ಕೃಷ್ಣ ಮೊದಲಾದವರು ಸೇರಿದಂತೆ ಹಲವು ಮುಖ್ಯಮಂತ್ರಿಗಳು ಆ ಸಮಿತಿಯಲ್ಲಿದ್ದರು. ಸ್ವಾಮಿ ವಿವೇಕಾನಂದರ ಧ್ಯೇಯ, ಆದರ್ಶಗಳನ್ನು ದೇಶದೆಲ್ಲೆಡೆ ಹರಡಲು, ವಿಶೇಷವಾಗಿ ಯುವಜನತೆಯ ನಡುವೆ ಹಬ್ಬಿಸಲು ಜನ್ಮಶತಮಾನೋತ್ಸವದ ಅಂಗವಾಗಿ ಹಲವು ಕಾರ್ಯಕ್ರಮಗಳನ್ನು ನಡೆಸಲು ಯೋಜನೆಯನ್ನು ತಯಾರಿಸಲಾಯಿತು. ರಾಜ್ಯ ಸರ್ಕಾರಗಳೂ ವಿವಿಧ ಕಾರ್ಯಗಳನ್ನು ಹಮ್ಮಿಕೊಂಡವು.

ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಭಾರತದ ಉದ್ದಗಲ ಸಂಚರಿಸುತ್ತಿದ್ದಾಗ ಮೈಸೂರಿನ ದಿವಾನರಾದ ಶೇಷಾದ್ರಿ ಅಯ್ಯರ್ ಅವರ ಆಹ್ವಾನದ ಮೇರೆಗೆ ೧೮೯೨ರ ನವೆಂಬರ್‌ಲ್ಲಿ ಮೈಸೂರಿಗೂ ಭೇಟಿಕೊಟ್ಟರು, ಹಾಗೂ ಅಲ್ಲಿನ ನಿರಂಜನ ಮಠದಲ್ಲಿ ತಂಗಿದ್ದರು ಎಂಬುದು ಈಗ ದೃಢೀಕೃತವಾಗಿರುವ ಚಾರಿತ್ರಿಕ ಸತ್ಯವಾಗಿದೆ. ದಿವಾನರು ಮೊದಲಿಗೆ ಸ್ವಾಮೀಜಿಯವರನ್ನು ಬೆಂಗಳೂರಿನಲ್ಲಿ ಭೇಟಿಯಾಗಿದ್ದರು. ಅವರ ಆಹ್ವಾನದ ಮೇರೆಗೆ ಸ್ವಾಮೀಜಿ ಮೈಸೂರಿಗೆ ಬಂದಾಗ, ದಿವಾನರು ಮೈಸೂರಿನ ರಾಜರಾಗಿದ್ದ ಶ್ರೀ ಚಾಮರಾಜೇಂದ್ರ ಒಡೆಯರ್ ಅವರೊಂದಿಗೆ, ಆಗಿನ ವೈಸರಾಯ್ ಲ್ಯಾನ್ಸ್‌ಡೌನ್ ಅವರ ಆತಿಥ್ಯ , ಸತ್ಕಾರಗಳಲ್ಲಿ ಮಗ್ನರಾಗಿದ್ದರು. ಆದ್ದರಿಂದ ದಿವಾನರ ಮನೆಯ ಹಿಂಭಾಗದಲ್ಲಿದ್ದ ನಿರಂಜನ ಮಠ

ದಲ್ಲಿ ಸ್ವಾಮೀಜಿ ತಂಗಬೇಕಾಯಿತು. ಕೆಲವು ದಿನಗಳ ಬಳಿಕ ದಿವಾನರು ಶ್ರೀ ಚಾಮರಾಜೇಂದ್ರ ಒಡೆಯರಿಗೆ ಸ್ವಾಮೀಜಿಯವರನ್ನು ಪರಿಚಯಿಸಿದರು. ಮಹಾರಾಜರು ಸ್ವಾಮೀಜಿಯವರನ್ನು ಅರಮನೆಗೆ ಆಮಂತ್ರಿಸಿ, ಅಲ್ಲೇ ಬಂದು ತಂಗಲು ಕೋರಿಕೊಂಡರೂ, ಸ್ವಾಮೀಜಿಯವರು ರಾಜಾತಿಥ್ಯವನ್ನು ತೊರೆದು, 'ನಿರಂಜನ ಮಠ'ದ ಅನಾಥಾಲಯದಲ್ಲೇ ಇರ ಬಯಸಿದರು. ಕೊನೆಯ ಕೆಲವು ದಿನಗಳಲ್ಲಿ ಅವರು ದಿವಾನರ ನಿವಾಸವಾಗಿದ್ದ 'ಶೇಷಾದ್ರಿ ಭವನ'ದಲ್ಲೂ ತಂಗಿದರು. ಸ್ವಾಮೀಜಿಯವರು ಮಹಾರಾಜರೊಡನೆ, ದಿವಾನರೊಡನೆ ಹಾಗೂ ಜನಸಾಮಾನ್ಯರೊಂದಿಗೆ ಒಡನಾಡಿದರು. ಚಿಕಾಗೋದಲ್ಲಿ ಮುಂದಿನ ವರ್ಷ ನಡೆಯಲಿದ್ದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ನಿರ್ಧರಿಸಿದ್ದು ಕೂಡ ಅವರು ಮೈಸೂರಿನಲ್ಲಿ ಇದ್ದಾಗಲೇ.

### 'ವಿವೇಕ ಸ್ಮಾರಕ' ದ ಸಂಕಲ್ಪ

ಈ ಹಿನ್ನೆಲೆಯಲ್ಲಿ ಯುವಜನರಲ್ಲಿ ಸ್ವಾಮಿ ವಿವೇಕಾನಂದರ ನೈತಿಕ, ಆಧ್ಯಾತ್ಮಿಕ ಮೌಲ್ಯವನ್ನು ಹರಡುವುದಕ್ಕೆ ಸಾಧ್ಯವಾಗುವಂತೆ, ಸ್ವಾಮೀಜಿಯವರಿಗೆ ಒಂದು ಸೂಕ್ತವಾದ ಸ್ಮಾರಕವನ್ನು ನಿರ್ಮಿಸಬೇಕೆಂದು ರಾಜ್ಯ ಸರ್ಕಾರ ತೀರ್ಮಾನಿಸಿತು. ಸ್ವಾಮೀಜಿ ತಂಗಿದ್ದ ನಿರಂಜನ ಮಠ ಹಾಗೂ ಅದರ ಪಕ್ಕದಲ್ಲೇ ಹೊಂದಿಕೊಂಡಿರುವ ಎನ್.ಟಿ.ಎಂ ಶಾಲೆಯೊಟ್ಟು ವಠಾರವನ್ನು ''**ಸ್ವಾಮಿ ವಿವೇಕಾನಂದ ಯುವ ಸಾಂಸ್ಕೃತಿಕ ಸೇವಾ ಕೇಂದ್ರ**''ದ ನಿರ್ಮಾಣಕ್ಕೆ ಬಳಸಿಕೊಳ್ಳಲು ತೀರ್ಮಾನಿಸಲಾಗಿತ್ತು.

ಕರ್ನಾಟಕ ರಾಜ್ಯ ಸರ್ಕಾರವು ಈ ಶಾಲೆಯನ್ನು ರಾಮಕೃಷ್ಣ ಮಠಕ್ಕೆ ಹಸ್ತಾಂತರಿಸಲು ಅಗತ್ಯವಾದ ಸರ್ಕಾರಿ ಆಜ್ಞೆಯನ್ನು ಹೊರಡಿಸಿತು. NICಯು 'ಸ್ವಾಮಿ ವಿವೇಕಾನಂದ ಯುವ ಸಾಂಸ್ಕೃತಿಕ ಸೇವಾ ಕೇಂದ್ರ'ದ ನಿರ್ಮಾಣಕ್ಕೆ ಅಗತ್ಯವಾದ ಅನುಮತಿ ನೀಡಿ, ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದಿಂದ ೫ ಕೋಟಿ ರೂ. ಅನುದಾನವನ್ನು ಮಂಜೂರು ಮಾಡಿತು; ಅದರಲ್ಲಿ ೨೫ ಲಕ್ಷವನ್ನು ಬಿಡುಗಡೆ ಮಾಡಿತು.

### ಅನವಶ್ಯಕ ಗೊಂದಲ

ಈ ನಡುವೆ, ಶಾಲೆಯನ್ನು 'ವಿವೇಕ ಸ್ಮಾರಕ'ಕ್ಕೆ ಹಸ್ತಾಂತರಿಸುವ ವಿಷಯವಾಗಿ ಕೆಲವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ, ಅದಕ್ಕೆ ವಿರುದ್ಧವಾಗಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು; ಆದರೆ ನ್ಯಾಯಾಲಯವು ಅದನ್ನು ತಿರಸ್ಕರಿಸಿ, ಸರ್ಕಾರದ ಆಜ್ಞೆಯನ್ನು ಎತ್ತಿಹಿಡಿಯಿತು. ಶಾಲೆಯಲ್ಲಿ ಓದುತ್ತಿದ್ದ ಕೆಲವೇ ಮಂದಿ ವಿದ್ಯಾರ್ಥಿಗಳ ಹೆತ್ತವರನ್ನು ಒಳಗೊಂಡ ಒಂದು ನಿಯೋಗವು ಈ ಶಾಲೆಯ ಹಸ್ತಾಂತರವನ್ನು ತಡೆಹಿಡಿಯುವ ಪ್ರಯತ್ನ ಮಾಡಿದ್ದರು; ಆದರೆ ಅವೆಲ್ಲವೂ ವಿಫಲಗೊಂಡಿದ್ದವು. ಇತ್ತೀಚೆಗೆ ಉಚ್ಚ ನ್ಯಾಯಾಲಯವು ಮತ್ತೆ ಸರ್ಕಾರದ ಆಜ್ಞೆಯನ್ನು ಎತ್ತಿ ಹಿಡಿದು, ಎನ್.ಟಿ.ಎಂ. ಶಾಲೆಯನ್ನು ದೇವರಾಜ ಸರ್ಕಾರಿ ಶಾಲೆಯಲ್ಲಿ ವಿಲೀನಗೊಳಿಸುವ ಕಾರ್ಯವನ್ನು ಕೂಡಲೇ ನೆರವೇರಿಸಲು ಆದೇಶ ನೀಡಿದೆ.

ನ್ಯಾಯಾಲಯದ ಈ ಆದೇಶವನ್ನು ಗೌರವಿಸಿ, ಶಾಲೆಯನ್ನು ವಿಲೀನಗೊಳಿಸಿ ಆ ಸ್ಥಳದಲ್ಲಿ 'ವಿವೇಕ ಸ್ಮಾರಕ'ದ ನಿರ್ಮಾಣದಿಂದ ಯಾವುದೇ ಬಗೆಯಲ್ಲೂ ವಿದ್ಯಾರ್ಥಿಗಳಿಗೆ ಧಕ್ಕೆಯಾಗದು. ಸಮೀಪದ ದೇವರಾಜ ಶಾಲೆಯಲ್ಲಿ ಅವರಿಗೆ ಸೂಕ್ತ ವಿದ್ಯಾಭ್ಯಾಸ ಲಭಿಸುವುದು. 'ವಿವೇಕ ಸ್ಮಾರಕ'ದ ನಿರ್ಮಾಣದಿಂದ ಸುತ್ತಮುತ್ತಲ ಅನೇಕ ವಿದ್ಯಾಸಂಸ್ಥೆಗಳಲ್ಲಿ ಕಲಿಯುವ ಸಾವಿರಾರು ಮಂದಿ ಕನ್ನಡ ಯುವಜನತೆಗೆ ಸ್ವಾಮಿ ವಿವೇಕಾನಂದರ ಧ್ಯೇಯಾದರ್ಶಗಳನ್ನು ಹರಡಲು ಹಾಗೂ ಅವರಲ್ಲಿ ಉತ್ತಮ ವ್ಯಕ್ತಿತ್ವ ವಿಕಸನಕ್ಕೆ ಅಗತ್ಯವಾದ ಸ್ಫೂರ್ತಿ, ಉತ್ಸಾಹಗಳನ್ನು ತುಂಬಲು ಯೋಗ್ಯವಾದ ಹಲವಾರು ಚಟುವಟಿಕೆಗಳನ್ನು ನಡೆಸಲಾಗುವುದು. ಮೈಸೂರಿನ ಜನತೆಗೆ, ಅದರಲ್ಲೂ ವಿಶೇಷವಾಗಿ ಯುವಕರಿಗೆ ಇದರಿಂದ ಹೆಚ್ಚಿನ ಪ್ರಯೋಜನ ದೊರೆಯಲಿದೆ. ಈ ರೀತಿ ಹಲವು ದೂರದರ್ಶಿಯಾದ, ಫಲಕಾರಿಯಾದ ಹಾಗೂ ಭವಿಷ್ಯ ನಿರ್ಮಾಣಕಾರಿಯಾದ ಚಟುವಟಿಕೆಗಳಿಗೆ ಈ ಸ್ಮಾರಕವು ಕೇಂದ್ರಬಿಂದುವಾಗಲಿದೆ. ಇದರಿಂದ ಶಿಕ್ಷಣ, ಸಂಸ್ಕೃತಿ, ಪ್ರಗತಿ ನೈತಿಕತೆ ಹಾಗೂ ಸೇವಾ ಮನೋಭಾವ ಇವನ್ನು ವರ್ಧಿಸುವ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗುವುದು. ಇದರೊಂದಿಗೆ ಕನ್ನಡ, ಭಾಷೆ ಸಾಹಿತ್ಯ, ಸಂಸ್ಕೃತಿಗಳಿಗೆ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡಿರುವ ಶ್ರೀ ರಾಮಕೃಷ್ಣ ಆಶ್ರಮವು ಈ ಕ್ಷೇತ್ರಗಳಲ್ಲೂ ಹಲವು ಕಾರ್ಯಗಳನ್ನು ನಡೆಸಲಿದೆ. ಈ ಯೋಜನೆಗಳ ಸರಿಯಾದ ಮಾಹಿತಿಯನ್ನು ಹೊಂದದೆ, 'ಕನ್ನಡ ಶಾಲೆಯೊಂದನ್ನು ಮುಚ್ಚಲಾಗುತ್ತಿದೆ' ಎಂಬ ಆತಂಕದಿಂದ ಕೆಲವು ವ್ಯಕ್ತಿಗಳು ಈ ಸ್ಮಾರಕಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದು ಅತ್ಯಂತ ದುರದೃಷ್ಟಕರವಾದ ಸಂಗತಿ.

### 'ವಿವೇಕ ಸ್ಮಾರಕ'ದಲ್ಲಿ ನಡೆಯಲಿರುವ ಚಟುವಟಿಕೆಗಳು

ಸೀಮಿತ ಅವಧಿಯ ಕೋರ್ಸ್‌ಗಳು, ವ್ಯಕ್ತಿತ್ವ ವಿಕಸನ ಹಾಗೂ ಆಧ್ಯಾತ್ಮಿಕ ಶಿಬಿರಗಳು, ಗ್ರಂಥಾಲಯ, ತರಬೇತಿ ಶಿಬಿರಗಳು, ಯೋಗ, ಭಾರತೀಯ ಸಂಗೀತ ತರಗತಿಗಳು, ಕೌಶಲ್ಯ ಬೆಳವಣಿಗೆ ಹಾಗೂ ಉದ್ಯೋಗಾಭಿವೃದ್ಧಿಯ ಕೋರ್ಸ್‌ಗಳು, ಇಂಗ್ಲಿಷ್ ಹಾಗೂ ಕನ್ನಡ ಸಂಭಾಷಣ ಶಿಬಿರಗಳು –

ಇವು ಇಲ್ಲಿನ ಚಟುವಟಿಕೆಗಳಲ್ಲಿ ಸೇರಿರುತ್ತವೆ. ಶೈಕ್ಷಣಿಕ ಸಂಸ್ಥೆಗಳು ಹೆಚ್ಚಾಗಿರುವ ಪ್ರದೇಶದಲ್ಲೇ 'ವಿವೇಕ ಸ್ಮಾರಕ'ದ ನಿರ್ಮಾಣವಾಗಲಿರುವುದರಿಂದ, ಈ ವಿದ್ಯಾಸಂಸ್ಥೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಓದು, ತರಬೇತಿ ಹಾಗೂ ಜೀವನಕ್ಕೆ ನೆರವಾಗಬಲ್ಲ ಹತ್ತು ಹಲವು ಚಟುವಟಿಕೆಗಳನ್ನು ಇಲ್ಲಿ ನಡೆಸುವುದು ಅತ್ಯಂತ ಸೂಕ್ತವಾಗುವುದು. ಈ ಮೂಲಕ ಈ ಕೇಂದ್ರವು ಮೈಸೂರು ನಗರದ ಜನಜೀವನದಲ್ಲಿ ಒಂದು ಪ್ರಧಾನವಾದ ಪ್ರೇರಕ ತರಬೇತಿ ಸಂಸ್ಥೆಯಾಗಿ ಬೆಳೆಯುವುದರಲ್ಲಿ ಯಾವುದೇ ಸಂದೇಹವಿಲ್ಲ.

## ಮೈಸೂರು ಹಾಗೂ ಸ್ವಾಮೀಜಿ


ಸ್ವಾಮಿ ವಿವೇಕಾನಂದರಿಗೂ ಮೈಸೂರಿಗೂ ಬೆಸೆದಿರುವ ನಂಟು ಅಭೇದ್ಯವಾದುದು. 1895ರಲ್ಲಿ ಸ್ವಾಮೀಜಿ ದಿವಾನ್ ಸರ್ ಕೆ. ಶೇಷಾದ್ರಿ ಅಯ್ಯರ್ ಅವರಿಗೆ ಬರೆದ ಪತ್ರದಲ್ಲಿ ಹೀಗೆ ಹೇಳುತ್ತಾರೆ : **''ದಕ್ಷಿಣ ಭಾರತದ ಜನರಿಗೆ ನಾನು ವಿಶೇಷವಾಗಿ ಋಣಿಯಾಗಿದ್ದೇನೆ, ಅದರಲ್ಲಿ ಬಹುಪಾಲು ಮೈಸೂರಿಗೆ ಸೇರುತ್ತದೆ..''** ಚಿಕಾಗೋ ಧರ್ಮಸಮ್ಮೇಳನದಲ್ಲಿ ಭಾಗವಹಿಸಲು ಅಮೆರಿಕಾಗೆ ಹೋಗುವ ಸಂಕಲ್ಪವನ್ನು ಸ್ವಾಮೀಜಿ ಮೊದಲ ಬಾರಿಗೆ ಮಾಡಿದ್ದೂ ಇಲ್ಲೇ. ಇದಲ್ಲದೆ, ಒಂದು ಪತ್ರದಲ್ಲಿ ಸ್ವಾಮೀಜಿ ತಮ್ಮ ಪ್ರಿಯಶಿಷ್ಯ ಅಳಸಿಂಗ ಪೆರುಮಾಳ್ ಅವರಿಗೆ ಹೀಗೆ ಬರೆಯುತ್ತಾರೆ (1894ರ ಆಗಸ್ಟ್ 31 ರಂದು): **''ಮೈಸೂರು ಒಂದಲ್ಲ ಒಂದು ದಿನ ನಮ್ಮ ಸಂಸ್ಥೆಯ ಒಂದು ದೊಡ್ಡ ಪ್ರಬಲವಾದ ಸ್ಥಾನವಾಗುವುದು.''**

ಕರ್ನಾಟಕ ಹಾಗೂ ಮೈಸೂರು ಸ್ವಾಮಿ ವಿವೇಕಾನಂದರ ಪಾದಸ್ಪರ್ಶದಿಂದ ಪುನೀತವಾಗಿದೆ. ವಿಶ್ವಮಾನವ ವಿವೇಕಾನಂದರು ಇಡೀ ಜಗತ್ತಿಗೆ ಒಂದು ಮಹಾನ್ ಶಕ್ತಿಯ ಅವತರಣವಾಗಿ ಬಂದವರು. ಈ ದಿವ್ಯಚೇತನಕ್ಕೆ ಮೈಸೂರು ನಗರ ನೀಡಬಹುದಾದ ಸೂಕ್ತವಾದ ಕೊಡುಗೆಯೇ **'ವಿವೇಕ ಸ್ಮಾರಕ'**. ಸೇವಾಕಾರ್ಯವೇ ಧ್ಯೇಯವಾಗಿ ಉಳ್ಳ ಒಂದು ಬೃಹತ್ ಸಂಸ್ಥೆ ಇಲ್ಲಿ ಸ್ಥಾಪನೆಗೊಳ್ಳುವ ಮೂಲಕ ಸಮಸ್ತ ಕರ್ನಾಟಕ ಹಾಗೂ ಮೈಸೂರು ನಗರ ಸ್ವಾಮಿ ವಿವೇಕಾನಂದರ ಚೇತನಕ್ಕೆ ಯೋಗ್ಯ ಕಾಣಿಕೆಯನ್ನು ಅರ್ಪಿಸಿದಂತಾಗುವುದು.

## ವಿಶ್ವವಿಶಾಲ ಧ್ಯೇಯ, ಆದರ್ಶ

ಸ್ವಾಮಿ ವಿವೇಕಾನಂದರು ಬಯಸಿದಂತೆ ಈ ಸಂಸ್ಥೆಯು ಸಮಾಜದ ಎಲ್ಲ ಹಂತಗಳಲ್ಲಿರುವವರಿಗೂ ಉತ್ತಮ ಅವಕಾಶವನ್ನು ಒದಗಿಸುವುದು. ಮಕ್ಕಳಿಗೆ, ಯುವಕರಿಗೆ, ವಯಸ್ಕರಿಗೆ – ಅವರವರ ಮನೋಧರ್ಮಕ್ಕನುಗುಣವಾಗಿ ವಿವಿಧ ಪುನಶ್ಚೇತನ ಶಿಬಿರಗಳಲ್ಲಿ ಪಾಲ್ಗೊಳ್ಳಬಹುದಾಗಿದೆ. ಜಾತಿ, ಧರ್ಮ, ಪಂಥ, ವರ್ಣ ಹಾಗೂ ಲಿಂಗಭೇದಗಳಿಲ್ಲದೆ ಪ್ರತಿಯೊಬ್ಬರಿಗೂ ಅವರವರ ಸ್ಥಾನದಲ್ಲಿದ್ದುಕೊಂಡೇ ಬೆಳವಣಿಗೆ ಉಂಟಾಗುವಂತಹ ಪರಿಸರ ನಿರ್ಮಾಣವಾಗಬೇಕೆಂದು ಸ್ವಾಮೀಜಿ ಬಯಸಿದ್ದರು. ಅವರ ಈ ವಿಶ್ವವಿಶಾಲ ಹಾಗೂ ಜಾಗತಿಕ ಆದರ್ಶವನ್ನು ಎಲ್ಲ ವರ್ಗಗಳ ಜನರಿಗೂ ಬಿತ್ತರಿಸುವುದು 'ವಿವೇಕ ಸ್ಮಾರಕ'ದ ಧ್ಯೇಯವಾಗಿದೆ. ಸಮಾಜದಲ್ಲಿ ಭೇದಭಾವವನ್ನು ಬಿತ್ತುವ, ದ್ವೇಷ-ಅಸೂಯೆಗಳನ್ನು ಹರಡುವ ಎಲ್ಲ ಶಕ್ತಿಗಳ ವಿರುದ್ಧ ಸ್ವಾಮೀಜಿ ದನಿಯೆತ್ತಿದ್ದರು. ಸಮಾಜವನ್ನು ಒಂದಾಗಿಸುವ, ವಿಕಾಸದತ್ತ ಎಲ್ಲರನ್ನೂ ಕರೆದೊಯ್ಯುವ ಸಮಾನತೆಯ ಆದರ್ಶ ಅವರದಾಗಿತ್ತು. ಈ ಆದರ್ಶವನ್ನು ಎಲ್ಲೆಡೆ ಹರಡುವ ಕಾರ್ಯವೇ 'ವಿವೇಕ ಸ್ಮಾರಕ'ದಲ್ಲಿ ನಡೆಯಲಿದೆ. ಇಡೀ ಮನುಕುಲವನ್ನು ಒಳಗೊಳ್ಳುವ ಈ ಉದಾತ್ತ ಕಾರ್ಯಕ್ಕೆ ಬೆಂಬಲವಾಗಿ ನಾಡಿನ ಸುಪ್ರಸಿದ್ಧ ಸಾಹಿತಿಗಳಾದ ಡಾ. ಎಸ್.ಎಲ್. ಭೈರಪ್ಪ, ಡಾ. ಸಿ.ಪಿ.ಕೆ., ಡಾ. ಹಂಪನಾ, ಡಾ.ಚಿದಾನಂದ ಗೌಡ, ಡಾ. ಭೈರವಮೂರ್ತಿ ಮುಂತಾದವರು ನಿಂತಿದ್ದಾರೆ. ದಿವಂಗತ ಡಾ. ಮಳಲಿ ವಸಂತ ಕುಮಾರ್ ಹಾಗೂ ಡಾ. ಪ್ರಭುಶಂಕರ ಅವರು ಕೂಡ 'ವಿವೇಕ ಸ್ಮಾರಕ'ಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದರು. 'ವಿವೇಕ ಸ್ಮಾರಕ'ಕ್ಕೆ ವ್ಯಕ್ತ

### ಯುವಚೇತನ



ಪರಿಶುದ್ಧವಾದ ಹೃದಯದಲ್ಲಿ ಆಧ್ಯಾತ್ಮಿಕ ಅನುಭವಗಳು ತಮಗೆ ತಾವೇ ವ್ಯಕ್ತವಾಗುತ್ತವೆ ಎಂಬುದು ಸತ್ಯ. ಅದನ್ನು ನಾವು ಹೊರಗಿನಿಂದ ಸಂಪಾದಿಸಿದುದಲ್ಲ. ಆದರೆ ಈ ಪರಿಶುದ್ಧ ಹೃದಯವನ್ನು ಪಡೆಯಬೇಕಾದರೆ ದೀರ್ಘವಾದ ನಿರಂತರವಾದ ಸಾಧನೆ ಅತ್ಯಾವಶ್ಯಕ. ಲೌಕಿಕ ಜ್ಞಾನದ ವಿಷಯದಲ್ಲೂ ಕೂಡ, ಸರಿಯಾಗಿ ವಿಚಾರ ಮಾಡಿ ನೋಡಿದರೆ, ಮಹಾ ವಿಜ್ಞಾನಿಗಳಿಗೆ ಪ್ರಕೃತಿ ನಿಯಮದ ಸತ್ಯಗಳು ಆಕಸ್ಮಾತ್ತಾಗಿ ಮಿಂಚಿನಂತೆ ಹೊಳೆದಿರುವುದು, ಮತ್ತು ಅವುಗಳಿಗೆ ಅವರು ನಂತರ ಒಂದು ನಿಯಮದ ಸ್ವರೂಪವನ್ನು ಕೊಟ್ಟಿರುವುದು ಕಾಣುವುದು. ಈ ಸತ್ಯಗಳು ಅಜ್ಞಾನಿಗಳ ಮನಸ್ಸಿನಲ್ಲಿ, ಕಾಡು ಜನರಲ್ಲಿ ಹೊಳೆದಿಲ್ಲ. ಸತತ ಅಧ್ಯಯನ ಮತ್ತು ಮನನದ ರೀತಿಯಾದ ಕಠಿಣ ತಪಸ್ಸು, ಅಥವಾ ಸಾಧನೆ ಅತ್ಯಾವಶ್ಯಕ ಎಂಬುದನ್ನು ಇದು ತೋರುವುದು.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ ೫, ಪು.೪೫೮)*